# ಕುವೆಂಪು ವಿಶ್ವವಿದ್ಯಾಲಯ

ಸಂಖ್ಯೆ:ಕುವಿ/ಪವಿ/ಡಿಎಸ್-1/56/ ಡಿ763 /2025-26

ಕುಲಸಚಿವ (ಪರೀಕ್ಷಾಂಗ) ರವರ ಕಛೇರಿ
ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577451
ದೂರವಾಣಿ: 08282 - 256166
**ದಿನಾಂಕ: 02-08-2025**

## ಪರಿಷ್ಕೃತ ಅಧಿಸೂಚನೆ

ವಿಷಯ : ದೂರಶಿಕ್ಷಣದ 2023 ಹಾಗೂ 2024ನೇ ಸಾಲಿನ ಎರಡು ಆವೃತ್ತಿಗಳ ಆನ್‌ಲೈನ್ ಪ್ರೋಗ್ರಾಂ ಪದವಿ ಕೋರ್ಸುಗಳ ಪ್ರಥಮ ಸೆಮಿಸ್ಟರ್ ಪರೀಕ್ಷಾ ಅರ್ಜಿ ಸಲ್ಲಿಕೆ ಮತ್ತು ಪರೀಕ್ಷಾ ಶುಲ್ಕ ಪಾವತಿ ಕುರಿತು.

ಉಲ್ಲೇಖ : ಅಧಿಸೂಚನೆ ಸಂಖ್ಯೆ:ಕುವಿ / ಪವಿ / ಡಿಎಸ್-1 / 56 / ಡಿ715 / 2025-26, ದಿನಾಂಕ:22-07-2025

*****

ವಿಶ್ವವಿದ್ಯಾಲಯದ ದೂರಶಿಕ್ಷಣದ ಜುಲೈ/ಆಕ್ಟೋಬರ್ 2023 ಹಾಗೂ ಜುಲೈ/ಆಕ್ಟೋಬರ್ 2024ರ ಆವೃತ್ತಿಗಳ ಆನ್‌ಲೈನ್ ಪ್ರೋಗ್ರಾಂನ ಅಡಿಯಲ್ಲಿ ಪ್ರವೇಶ ಪಡೆದ ಬಿ.ಎ., ಬಿ.ಬಿ.ಎ, ಬಿ.ಕಾಂ., ಎಂ.ಎ., ಎಂ.ಕಾಂ. ಮತ್ತು ಎಂ.ಎಸ್ಸಿ., (ಗಣಿತಶಾಸ್ತ್ರ) ಪದವಿ ಕೋರ್ಸುಗಳಿಗೆ ಪ್ರವೇಶ ಪಡೆದ ಎಲ್ಲಾ ವಿದ್ಯಾರ್ಥಿಗಳು ಪ್ರಥಮ ಸೆಮಿಸ್ಟರ್ ಪರೀಕ್ಷೆಗಳ ಸಂಬಂಧ ಈ ಕೆಳಕಂಡಂತೆ ನಮೂದಿಸಲಾಗಿರುವ ಪರೀಕ್ಷಾ ಶುಲ್ಕವನ್ನು ದಿನಾಂಕ: 31-07-2025ರವರೆಗೆ ಪಾವತಿಸಲು ಸೂಚಿಸಲಾಗಿತ್ತು. ಸದರಿ ಪರೀಕ್ಷಾ ಶುಲ್ಕವನ್ನು ಪಾವತಿಸುವ ದಿನಾಂಕವನ್ನು **12-08-2025 ರವರೆಗೆ ವಿಸ್ತರಿಸಲಾಗಿದೆ.** ಉಳಿದಂತೆ ಅಧಿಸೂಚನೆಯಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಪರೀಕ್ಷಾ ಅರ್ಜಿ ಹಾಗೂ ಶುಲ್ಕ ಪಾವತಿ ಚಲನ್ ನಮೂನೆಗಳನ್ನು ಈ ಅಧಿಸೂಚನೆಯೊಂದಿಗೆ ಲಗತ್ತಿಸಿರುವ **ಅರ್ಜಿಯನ್ನು ಭರ್ತಿ ಮಾಡಿ ನಿಗದಿತ ಚಲನ್‌ನ್ನು ಭಾರತೀಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, NEFT/RTGS ಅಥವಾ D.Dಯನ್ನು ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ ಇವರ ಪದನಾಮದಲ್ಲಿ, ಪರೀಕ್ಷಾ ಖಾತೆ ಸಂಖ್ಯೆ: 54023036246 (IFSC Code: SBIN0040759) ಪಾವತಿಸಿ, ಭರ್ತಿ ಮಾಡಿದ ಅರ್ಜಿ ಮತ್ತು ಚಲನ್‌ನ ಮೂಲ ಪ್ರತಿಯನ್ನು ಕುಲಸಚಿವರು (ಪರೀಕ್ಷಾಂಗ), ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ-577451,** ಶಿವಮೊಗ್ಗ ಜಿಲ್ಲೆ – ಈ ವಿಳಾಸಕ್ಕೆ ನೇರವಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

**ಪರೀಕ್ಷಾ ಶುಲ್ಕದ ವಿವರ**

| | |
|---|---|
| ಬಿ.ಎ., ಬಿ.ಕಾಂ., ಬಿ.ಬಿ.ಎ ಮತ್ತು ಎಂ.ಎ., | ರೂ. 1400/- |
| ಎಂ.ಕಾಂ., ಮತ್ತು ಎಂ.ಎಸ್ಸಿ., (ಗಣಿತಶಾಸ್ತ್ರ) | ರೂ. 1500/- |

**ಸೂಚನೆ:**

1. ಪರೀಕ್ಷಾ ವೇಳಾಪಟ್ಟಿಯನ್ನು ನಂತರದಲ್ಲಿ ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಪ್ರಕಟಿಸಲಾಗುವುದು.
2. ಹೆಚ್ಚಿನ ಮಾಹಿತಿಗಾಗಿ ವಿದ್ಯಾರ್ಥಿಗಳು ದೂರಶಿಕ್ಷಣ ನಿರ್ದೇಶನಾಲಯ ಮತ್ತು ಪರೀಕ್ಷಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ-ಈ ಕಛೇರಿಗಳನ್ನು ಸಂಪರ್ಕಿಸಬಹುದಾಗಿದೆ. ದೂರವಾಣಿ ಸಂಖ್ಯೆ: 9480957129 / 8762354244 / 7022255891.

ಕುಲಸಚಿವರು (ಪರೀಕ್ಷಾಂಗ)

ಕುಲಸಚಿವರು (ಪರೀಕ್ಷಾಂಗ)
ಕುವೆಂಪು ವಿಶ್ವವಿದ್ಯಾನಿಲಯ.
ಜ್ಞಾನ ಸಹ್ಯಾದ್ರಿ,
ಶಂಕರಘಟ್ಟ-577 451

**ಪ್ರತಿಗಳು:**

1. ನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
2. ಮಾನ್ಯ ಕುಲಪತಿಗಳು ಇವರ ಆಪ್ತ ಕಾರ್ಯಾಲಯ/ಕುಲಸಚಿವರು (ಆಡಳಿತ)/ಕುಲಸಚಿವರು (ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
3. ನಿರ್ದೇಶಕರು, ಯು.ಸಿ.ಸಿ.ಎಫ್. ಕುವೆಂಪು ವಿಶ್ವವಿದ್ಯಾಲಯ-ಅಧಿಸೂಚನೆಯನ್ನು ವಿಶ್ವವಿದ್ಯಾಲಯದ ಅಂತರ್ಜಾಲದಲ್ಲಿ ಪ್ರಕಟಿಸುವುದು.
4. ಕಛೇರಿ ಪ್ರತಿ.